ಹಾಕುತ್ತಾರೆ. ಅದು ಆದತಕ್ಷಣ ನಾವು ಸಿಟಿ ಸ್ಕ್ಯಾನ್‌ಗೆ ಏರ್ಪಾಡು ಮಾಡುತ್ತೇವೆ. ಟ್ರೋಮಾ ಸೆಂಟರ್ ಅಪ್‌ಗ್ರೇಡ್ ಮಾಡುತ್ತೇವೆ. ನಮಗೆ ಗೊತ್ತಿದೆ ಆ ನ್ಯಾಷನಲ್ ಹೈವೇಯಲ್ಲಿ ತುಂಬಾ ಅಪಘಾತಗಳಾಗುತ್ತವೆ. ಇದರ ಬಗ್ಗೆ ನಮಗೆ ಗಮನಕ್ಕೆ ಬಂದಿದೆ. ಇದನ್ನು ಸರಿಪಡಿಸಲು ಸುಮಾರು ಒಂದು ವರ್ಷವಾಗಬಹುದು.

ಚಿಕ್ಕೋಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆ

243 (2328) ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸಡಲಗ) : ಮಾನ್ಯ ಗ್ರಾಮೋಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕಿನ ಬೆಡಕಿಹಾಳ ಶಮನ್‌ವಾಡಿ ಗ್ರಾಮಕ್ಕೆ ಕುಡಿಯುವ ನೀರಿನ ಸರಬರಾಜು ಯೋಜನೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ದೊರಕಿದೆಯೆ: ಇದರ ಯೋಜನೆಯ ಒಟ್ಟು ವೆಚ್ಚ ಎಷ್ಟು;

ಆ) ಈ ಕಾಮಗಾರಿ ಕೆಲಸವು ಪೂರ್ಣವಾಗದಿರುವುದಕ್ಕೆ ಕಾರಣಗಳೇನು: ಈ ಯೋಜನಾ ಕಾಮಾಗಾರಿ ಕೆಲಸವು ಪ್ರಾರಂಭದಿಂದಲೂ ಕಳಪೆಮಟ್ಟದ್ದು ಆಗಿರುವುದು ನಿಜವೇ:ನಿಜವಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯೇ;

ಇ) ಈ ಕಾಮಗಾರಿ ಕೆಲಸವನ್ನು ಪೂರ್ಣಗೊಳಿಸಿ ಬೆಡಕಿಹಾಳ ಶಮನ್‌ವಾಡಿ ಗ್ರಾಮಕ್ಕೆ ನೀರನ್ನು ಎಂದು ಪೂರೈಸಲಾಗುವುದು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಬೆಡಕಿಹಾಳ್-ಶಮನ್‌ವಾಡಿ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು (ಪುನಶ್ಚೇತನ) ಯೋಜನೆಯ ರೂ.50.00 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ದಿನಾಂಕ:2-11-1995 ರಲ್ಲಿ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ) ಈ ಯೋಜನೆಯನ್ನು ಕೊಳವೆನೀರು ಸರಬರಾಜು ಯೋಜನೆಗಳ ಪುನಶ್ಚೇತನ ಲೆಕ್ಕ ಶೀರ್ಷಿಕೆಯಡಿ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ಅನುದಾನದಿಂದ ಮತ್ತು ಸರ್ಕಾರದಿಂದ ಬಿಡುಗಡೆಯಾದ ಹೆಚ್ಚುವರಿ ಅನುದಾನವನ್ನು ಉಪಯೋಗಿಸಿಕೊಂಡು, ಬೆಳಗಾವಿ ಜಿಲ್ಲಾ ಪಂಚಾಯತಿಯು ಹಂತಹಂತವಾಗಿ ಅನುಷ್ಠಾನಗೊಳಿಸುತ್ತಿದೆ. ಈಗಾಗಲೇ ಈ ಯೋಜನೆಯ ಮೇಲೆ ರೂ.37.68 ಲಕ್ಷ ವೆಚ್ಚವಾಗಿರುತ್ತದೆ. ಸೆಟ್ಲಿಂಗ್ ಬ್ಯಾಂಕ್‌ನ ಪ್ಲಾಸ್ಟರಿಂಗ್ ಕೆಲಸದಲ್ಲಿ ಕ್ಯೂರಿಂಗ್ ಸಾಕಷ್ಟು ಆಗದಿದ್ದುದರಿಂದ ಪ್ಲಾಸ್ಟರಿಂಗ್‌ನಲ್ಲಿ ಬಿರುಕುಗಳು ಕಾಣಿಸಿಕೊಂಡಿದ್ದು, ಅದನ್ನು ಸರಿಪಡಿಸಲು ಕ್ರಮ ಕೈಗೊಳ್ಳುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ಈ ಕುರಿತು ಜಿಲ್ಲಾ ಪಂಚಾಯತ್ ಸೂಕ್ತ ನಿರ್ದೇಶನ ನೀಡಿದೆ.

ಇ) ಈ ಯೋಜನೆಯನ್ನು 2000-2001ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ : ಮಾನ್ಯ ಅಧ್ಯಕ್ಷರೆ, ಬೆಡಕಿಹಾಳ್-ಶಮನ್‌ವಾಡಿ ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗೆ 1995 ರಲ್ಲಿ 50 ಲಕ್ಷ ರೂಪಾಯಿಗಳ

ಆಡಳಿತಾತ್ಮಕ ಮಂಜೂರಾತಿ ಸಿಕ್ಕಿರುತ್ತದೆ. ಇದರ ಬಗ್ಗೆ ನಾನು 1997-98 ರಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಆಗಿನ ಸರ್ಕಾರದ ಮಂತ್ರಿಗಳು ಇದನ್ನು 1998ನೇ ಇಸವಿಯೊಳಗಾಗಿ ಈ ಯೋಜನೆಯನ್ನು ಮಾಡಿಕೊಡುತ್ತೇವೆಂದು ಹೇಳಿದ್ದರು. ಮತ್ತೆ ಅದೇ ಪ್ರಶ್ನೆಯನ್ನು ಈಗ ಕೇಳಿದರೆ ಮಾನ್ಯ ಸಚಿವರು 2001ನೇ ಇಸವಿಗೆ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ. 50 ಲಕ್ಷ ರೂಪಾಯಿಗಳ ಈ ಒಂದು ಯೋಜನೆಯನ್ನು ಮುಗಿಸುವುದಕ್ಕೆ 5 ವರ್ಷಗಳನ್ನು ತೆಗೆದುಕೊಂಡರೆ ಈ ಯೋಜನೆಯನ್ನು ಯಾವಾಗ ಮುಗಿಸುತ್ತಾರೆಂದು ಸ್ಪಷ್ಟವಾಗಿ ಹೇಳಬೇಕು. ಈ ಯೋಜನೆಗೆ 3 ಜನ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯದರ್ಶಿಗಳು ಬಂದು ಹೋದರು. ಇದಕ್ಕೆ ಇಬ್ಬರು ಮಂತ್ರಿಗಳಾದರು, ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳವಾಗಿದೆ. ಈಗಾಗಲೇ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಅಲ್ಲಿ ಏನು ಕಾಮಗಾರಿಯಾಗಿದೆ, ಅಲ್ಲಿ ಆಗಿರುವ ಕಾಮಗಾರಿ ಕೆಲಸ ಕಳಪೆ ಮಟ್ಟದ್ದಾಗಿದೆ, ಅಲ್ಲಿ ಸೆಟ್ಟಿಂಗ್ ಟ್ಯಾಂಕ್ ಕೂಡ ಸರಿಯಾಗಿ ಕಟ್ಟಿರುವುದಿಲ್ಲ. ಪೈಪ್‌ಲೈನ್ ಕೂಡ ಸರಿಯಾಗಿ ಮಾಡಿರುವುದಿಲ್ಲವೆಂದು ಹೇಳಲಾಗಿದೆ. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಕೂಡ ಹೇಳಿದ್ದಾರೆ. ಈ ಕಾಮಗಾರಿ ಸರಿಯಾಗಿ ನಡೆದಿದೆಯೋ ಇಲ್ಲವೋ ಎನ್ನುವುದನ್ನು ನೋಡುವ ಸಲುವಾಗಿ ಒಬ್ಬ ಅಧಿಕಾರಿಯನ್ನು ನೇಮಕ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಇದು 50 ಲಕ್ಷ ರೂಪಾಯಿಗಳ ಒಂದು ಕಾರ್ಯಕ್ರಮ. ಈ ಕಾರ್ಯಕ್ರಮಕ್ಕೆ 37 ಲಕ್ಷ ರೂಪಾಯಿಗಳು ಈಗಾಗಲೇ ಖರ್ಚಾಗಿದೆ. ಬಾಕಿ ಹಣವನ್ನು ನಾವು ಅಡಿಷನಲ್ ಆಗಿ ಕೊಡುತ್ತಿದ್ದೇವೆ. ಈ ಕಾಮಗಾರಿಯನ್ನು ಈ ವರ್ಷದಲ್ಲಿ ಪೂರೈಸುತ್ತೇವೆ; ಮತ್ತು ಪ್ರೊಗ್ರೆಸ್ ವರ್ಕ್ಸ್ ಬಗ್ಗೆ ಕೇಳಿದ್ದಾರೆ. Rising Main from Devdurga, Raichur to treatment plant. ಈಗಾಗಲೇ ಇದು ಕಂಪ್ಲೀಟ್ ಆಗಿರುತ್ತದೆ. ಸೆಟ್ಟಿಂಗ್ ಟ್ಯಾಂಕ್ ಕೂಡ ಕಂಪ್ಲೀಟ್ ಆಗುತ್ತಿದೆ. ರಿವೈವಲ್ ಪೈಪ್‌ಲೈನ್ ಸ್ಕೀಂ ಯೋಜನೆಯಡಿಯಲ್ಲಿ ಇದನ್ನು ಮಾಡುತ್ತಿದ್ದೇವೆ. 70 ಲಕ್ಷ ರೂಪಾಯಿಗಳನ್ನು ಜಿಲ್ಲಾ ಪಂಚಾಯಿತಿ ಸ್ಕೀಂನಲ್ಲಿಟ್ಟಿರುತ್ತೇವೆ. ಈ ಕೆಲಸವನ್ನು ಮುಗಿಸುವುದಕ್ಕೆ ಯಾವುದೇ ಹಣದ ತೊಂದರೆಯಾಗುವುದಿಲ್ಲ. ಇನ್ನು ಏನಾದರೂ ಇದ್ದರೆ ಅಡಿಷನಲ್ ಆಗಿ ಹಣವನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಆದರೆ ಹಿಂದಿನ ಸರ್ಕಾರ ಮಾಡಿದ್ದೆಲ್ಲದರ ಬಗ್ಗೆ ನಾನು ಉತ್ತರವನ್ನು ಹೇಳುವುದಕ್ಕೆ ಬಹಳ ಕಷ್ಟವಾಗುತ್ತದೆ.

ಶ್ರೀ ಪುಕ್ಕೇರಿ ಪ್ರಕಾಶ್ ಬಾಬಣ್ಣ : ಸ್ವಾಮಿ, ಅಲ್ಲಿ ಕುಡಿಯುವ ನೀರಿಗೆ ಬಹಳ ಸಮಸ್ಯೆಯಿದೆ. ಅಲ್ಲಿ ಆದಷ್ಟು ಬೇಗನೆ ಕಾಮಗಾರಿಗಳನ್ನು ಪೂರ್ತಿಮಾಡಿ ಬೆಡಕಿಹಾಳ ಮತ್ತು ಶಮನವಾಡಿ ಈ ಎರಡು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಘೋರ್ಪಡೆಯವರೇ, ಚಿಕ್ಕೋಡಿ ತಾಲ್ಲೂಕಿನಲ್ಲಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಆದಷ್ಟು ಬೇಗ ನಿವಾರಣೆ ಮಾಡುತ್ತೀರಾ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ನೀವೇನು ಹೇಳುತ್ತೀರಿ?

ಶ್ರೀ ಎಂ.ವೈ. ಘೋರ್ಪಡೆ : ಆದಷ್ಟು ಬೇಗ ನಿವಾರಣೆ ಮಾಡುತ್ತೇವೆ.